### ಬಿಜೆಪಿಯಲ್ಲಿ ಬೆರೆತು ದಕ್ಷತೆಯಿಂದ ಕೆಲಸ ಮಾಡಿ ! ನೂತನ ಸಚಿವರಿಗೆ ಸಿಎಂ ಕಿವಿಮಾತು

# ಮಾತು ಉಳಿಸಿಕೊಂಡ ಯಡಿಯೂರಪ್ಪ

ವಿ.ಕ್ರ. 7-2-20

**ಬೆಂಗಳೂರು:** ನಿಮಗೆ ಮಾತು ಕೊಟ್ಟ ಪ್ರಕಾರ ಸಚಿವ ಸ್ಥಾನ ನೀಡಿರುವೆ. ಮೂಲ ಬಿಜೆಪಿಯವರ ಜತೆ ಬೆರೆತು ಸರಕಾರ ಹಾಗೂ ಪಕ್ಷಕ್ಕೆ ಉತ್ತಮ ಹೆಸರು ತರುವ ಕೆಲಸ ಮಾಡಿ ಎಂದು ನೂತನ ಸಚಿವರಿಗೆ ಸಿಎಂ ಬಿ.ಎಸ್.ಯಡಿಯೂರಪ್ಪ ಕಿವಿಮಾತು ಹೇಳಿದ್ದಾರೆ.


ವಿಧಾನಸೌಧದಲ್ಲಿ ಹೊಸ ಸಚಿವರೊಂದಿಗೆ ಸಭೆ ನಡೆಸಿ, ''ಸಂಪುಟ ವಿಸ್ತರಣೆ ಸವಾಲಿನ ಕೆಲಸವಾಗಿತ್ತು. ಇನ್ನೂ ಖಾತೆ ನೀಡಿಲ್ಲವೆಂದು ತಕರಾರು ತೆಗೆಯಬಾರದು. ಒಂದೆರಡು ದಿನದಲ್ಲಿ ಹೈಕಮಾಂಡ್ ಒಪ್ಪಿಗೆ ಮೇಲೆ ಖಾತೆ ಹಂಚಿಕೆ ಮಾಡಲಾಗುವುದು,'' ಎಂದು ಸೂಚಿಸಿದರು ಎನ್ನಲಾಗಿದೆ.

''ಬಂದೇ ಬಿಜೆಪಿಯಲ್ಲಿ ಒಂದಾಗಿದ್ದೀರಿ ಎಂಬ ಭಾವನೆ ಬೇರೂರುವಂತೆ ನಡೆದುಕೊಳ್ಳಬೇಕು. ಪ್ರತ್ಯೇಕವಾಗಿ ಗುರುತಿಸಿಕೊಂಡರೆ ಸರಕಾರ ಹಾಗೂ ಪಕ್ಷಕ್ಕೆ ಮುಜುಗರವಾಗುತ್ತದೆ,'' ಎಂದು ನಿರ್ದೇಶನ ಕೊಟ್ಟರೆಂದು ತಿಳಿದು ಬಂದಿದೆ.

**ಕೊಟ್ಟ ಮಾತು ಉಳಿಸಿಕೊಂಡ ಬಿಎಸ್‌ವೈ**

ಅರ್ಹರಿಗೆ ಸಚಿವ ಸ್ಥಾನ ನೀಡುವ ಮೂಲಕ ಕೊಟ್ಟ ಮಾತು ಸಿಎಂ ಬಿಎಸ್‌ವೈ ಕೊಟ್ಟ ಮಾತು ಉಳಿಸಿಕೊಂಡರು ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ರಾಜಕಾರಣದಲ್ಲಿ ಕೊಟ್ಟ ಮಾತು ನಡೆಸುವುದು ಬಹಳ ಅಪರೂಪ. ವಚನಭ್ರಷ್ಟತೆ ಎನ್ನುವುದು ಸಾಮಾನ್ಯ ಎಂಬಂತಾಗಿದೆ. ಆದರೆ, ಕ್ಲಿಷ್ಟ ಪರಿಸ್ಥಿತಿಯಲ್ಲೂ ಅರ್ಹರ ಹಿತ ಕಾಯುವಲ್ಲಿ ಬಿಎಸ್‌ವೈ ಯಶಸ್ವಿಯಾಗಿದ್ದಾರೆ. ಮುಂದಿನ ದಿನಗಳಲ್ಲಿ ಸಿಎಂ ಎಲ್ಲರಿಗೂ ನ್ಯಾಯವೊದಗಿಸಲಿದ್ದಾರೆ ಎಂದು ಬಿಎಸ್‌ವೈ ಆಪ್ತ ವರ್ಗದವರು ಹೇಳುತ್ತಿದ್ದಾರೆ.



ಪ್ರಮಾಣವಚನ ವೇಳೆ ವಿಜಯೇಂದ್ರ ಜತೆ ನೂತನ ಸಚಿವರು.

## ಮಿತ್ರ ಮಂಡಲ ವಿಸ್ತರಣೆ

» ಮೊದಲ ಪುಟದಿಂದ

ಗೆದ್ದ 11 ಮಂದಿಯಲ್ಲಿ ಕುಮಟಳ್ಳಿ ಹೊರತುಪಡಿಸಿ ಎಲ್ಲರೂ ಮಂತ್ರಿಗಳಾದಂತಾಗಿದೆ. ಅವರಿಗೆ ಬೇರೆ ಸ್ಥಾನಮಾನದ ನಿರೀಕ್ಷೆ ಇದೆ. ಆದರೆ, ಆರ್. ಶಂಕರ್ ಸಚಿವ ಸ್ಥಾನಕ್ಕಾಗಿ ಕಾಯಬೇಕಿದೆ. ಉಪ ಚುನಾವಣೆಯಲ್ಲಿ ಸೋತಿರುವ ಎಚ್.ವಿಶ್ವನಾಥ್, ಎಂ.ಟಿ.ಬಿ.ನಾಗರಾಜ್ ಅವರಿಗೂ ಕಾಯುವುದನ್ನು ಬಿಟ್ಟರೆ ಬೇರೆ ಆಯ್ಕೆಯಿಲ್ಲ.

**ಪ್ರಬಲ ಖಾತೆ ಮೇಲೆ ಕಣ್ಣು:** ಅರ್ಹ ಶಾಸಕರು ಪ್ರಬಲ ಖಾತೆಗಳಿಗಾಗಿ ಪಟ್ಟು ಹಿಡಿದಿದ್ದಾರೆ. ಹಾಗಾಗಿ ಖಾತೆ ಹಂಚಿಕೆಗೂ ಹೈಕಮಾಂಡ್ ಮಧ್ಯಸ್ಥಿಕೆ ಅನಿವಾರ್ಯ ಎಂಬಂತಾಗಿದೆ. ಈ ಸಂಬಂಧ ದಿಲ್ಲಿಗೆ ತೆರಳಿ ವರಿಷ್ಠರೊಂದಿಗೆ ಚರ್ಚಿಸಿ ನಿರ್ಧಾರ ಕೈಗೊಳ್ಳುವುದಾಗಿ ನೂತನ ಸಚಿವರಿಗೆ ಸಿಎಂ ಭರವಸೆ ನೀಡಿದ್ದಾರೆ. ಈ ಮಧ್ಯೆ ಹೊಸ ಸಚಿವರಿಗೆ ವಿಧಾನಸೌಧ-ವಿಕಾಸಸೌಧದಲ್ಲಿ ಕೊಠಡಿ ಹಂಚಿಕೆ ಮಾಡಲಾಗಿದೆ.

## 13 ಜಿಲ್ಲೆಗಳಿಗಿಲ್ಲ ಸಚಿವ ಸ್ಥಾನ

**ಬೆಂಗಳೂರು:** ಭಾರಿ ಸರ್ಕಸ್ ಬಳಿಕ ವಿಸ್ತರಣೆಗೊಂಡ ಸಂಪುಟದಲ್ಲಿ ಪ್ರಾದೇಶಿಕ ಹಾಗೂ ಜಾತಿವಾರು ಅಸಮತೋಲನ ಸೃಷ್ಟಿಯಾಗಿದೆ ಎಂಬ ಆರೋಪ ಕೇಳಿ ಬಂದಿದ್ದು, 13 ಜಿಲ್ಲೆಗಳಿಗೆ ಪ್ರಾತಿನಿಧ್ಯವೇ ಸಿಕ್ಕಿಲ್ಲ. ಸಿಎಂ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರಕಾರದಲ್ಲಿ ಲಿಂಗಾಯಿತ ಹಾಗೂ ಒಕ್ಕಲಿಗ ಶಾಸಕರು ಹೆಚ್ಚಿನ ಸಂಖ್ಯೆಯಲ್ಲಿ ಸಂಪುಟಕ್ಕೆ ಸೇರ್ಪಡೆಯಾಗಿದ್ದಾರೆ. ಜತೆಗೆ ಬೆಂಗಳೂರಿಗೆ 7 ಹಾಗೂ ಬೆಳಗಾವಿಗೆ 4 ಸಚಿವ ಸ್ಥಾನ ಸಿಕ್ಕಿದೆ.

ಈ ಬಾರಿ ಸಂಪುಟ ವಿಸ್ತರಣೆ ಸಂದರ್ಭದಲ್ಲೂ ಜಾತಿ ಹಾಗೂ ಪ್ರಾದೇಶಿಕ ಅಸಮತೋಲನ ನಿವಾರಿಸುವುದಕ್ಕೆ ಸಾಧ್ಯವಾಗಿಲ್ಲ. ವಿಸ್ತರಣೆ ವೇಳೆ ಒಬ್ಬರು ಲಿಂಗಾಯಿತ, ನಾಲ್ವರು ಒಕ್ಕಲಿಗ, ಒಬ್ಬರು ವಾಲ್ಮೀಕಿ ಒಬ್ಬರು ಬ್ರಾಹ್ಮಣ, ಒಬ್ಬರು ಕುರುಬ, ಒಬ್ಬರು ಮರಾಠ, ಒಬ್ಬರು ರಜಪೂತ ಸಮುದಾಯದವರಿಗೆ ಆದ್ಯತೆ ನೀಡಲಾಗಿದೆ. ಈ ಪೈಕಿ ಬೆಂಗಳೂರಿಗೆ 3 ಹಾಗೂ ಬೆಳಗಾವಿಗೆ 2 ಸಚಿವ ಸ್ಥಾನ ಲಭಿಸಿದೆ.

**ಪ್ರಾತಿನಿಧ್ಯದ ಜಿಲ್ಲೆಗಳು:** ಶಿವಮೊಗ್ಗ-2, ಬೆಳಗಾವಿ-4, ಬೆಂಗಳೂರು-7, ಹಾವೇರಿ-2, ಉತ್ತರ ಕನ್ನಡ-1, ಬಳ್ಳಾರಿ-1, ಚಿಕ್ಕಬಳ್ಳಾಪುರ-1, ಮಂಡ್ಯ-1, ಚಿತ್ರದುರ್ಗ-1, ಬಾಗಲಕೋಟೆ-1, ಹುಬ್ಬಳ್ಳಿ-ಧಾರವಾಡ-1, ಉಡುಪಿ-1, ತುಮಕೂರು-1, ಚಿಕ್ಕಮಗಳೂರು-1, ಗದಗ-1, ಬೀದರ್ -1, ಕೋಲಾರ-1.

**ಸಿಗದ ಜಿಲ್ಲೆಗಳು:** ದ.ಕ.. ವಿಜಯಪುರ, ಬೆಂಗಳೂರು ಗ್ರಾಮಾಂತರ, ರಾಮನಗರ, ದಾವಣಗೆರೆ, ಕಲಬುರಗಿ, ಕೊಪ್ಪಳ, ರಾಯಚೂರು, ಯಾದಗಿರಿ, ಚಾಮರಾಜನಗರ, ಹಾಸನ, ಮಡಿಕೇರಿ, ಮೈಸೂರು.